ಓಎಸ್ ನಂ.207|2020
ಡಿ ಡಬ್ಲ್ಯೂ-1

ದಿನಾಂಕಃ **04.12.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಕೆ ವಕೀಲರಿಂದಃ

ನಾನು 9 ನೇ ತರಗತಿವರಗೆ ಓದಿರುತ್ತೇನೆ ವಾದಿ ನನ್ನ ಅಣ್ಣ ನನ್ನ ತಂದೆಗೆ ನಾವು ಒಟ್ಟು ನಾಲ್ಕು ಜನ ಮಕ್ಕಳು . ಅವರ ಹೆಸರು ಅಂಜಿನಮ್ಮ , ಮುದ್ದಮ್ಮ , ರಾಮು ಅಂದರೆ ಈ ದಾವೆಯ ವಾದಿ ಮತ್ತು ನಾನು . ದಾವಾ ಸ್ವತ್ತು ವಾದಿಯ ಹೆಸರಿಗೆ ದಿಃ05.11.2008 ರ ನೊಂದಾಯಿತ ಕ್ರಯಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು ಸದರಿ ಸತ್ವನ್ನು ಒಟ್ಟು ಕುಟುಂಬದ ಆದಾಯದಿಂದ ವಾದಿಯ ಹೆಸರಿನಲ್ಲಿ ಖರೀದಿಸಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ನನಗೆ ಸೇರಿದ ನಿವೇಶನ ಸಂಖ್ಯೆ 536 ಇದೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು ಈ ದಾವಾ ಸ್ವತ್ತನ್ನು ಖರೀದಿಸಿದ ನಂತರ ವಾದಿ ಮತ್ತು ನಾನು ಹಾಗೂ ನನ್ನ ತಂದೆ ತಾಯಿ ಎಲ್ಲ ಸೇರಿ ಹಂಚಿಕೊಂಡಿದ್ದು ಅದರಂತೆ ಸ್ವತ್ತಿನ ಅರ್ಧ ಭಾಗ ವಾದಿಗೆ ಹೋಗಿದ್ದು ನನಗೆ ಅರ್ಧ ಭಾಗ ಬಂದಿದೆ ಎಂದು ನುಡಿಯುತ್ತಾರೆ. ನಿವೇಶನ ಸಂಖ್ಯೆ536 ರ ಅಳತೆ 20 x 20 ಅಡಿ ಎಂದರೆ ಸರಿ. ಸದರಿ ನಿವೇಶನ ಸಂಖ್ಯೆ 536 ರ ಪೂರ್ವಕ್ಕೆ ವಾದಿಗೆ ಸೇರಿದ ಮನೆ ಇದೆ ಎಂದರೆ ಸರಿಯಲ್ಲ . ಸಾಕ್ಷಿಗೆ ಸ.ನಂ. 23 ರಲ್ಲಿ 20 x 20 ಅಡಿ ವಿಸ್ತೀರ್ಣಕ್ಕೆ ಸಂಬಂದಿಸಿದಂತೆ ತುಮಕೂರು ತಹಶೀಲ್ದಾರ್ ರವರು ನೀಡಿದ ಹಕ್ಕುಪತ್ರದ ದೃಡಿಕೃತ ನಕಲನ್ನು ತೋರಿಸಿ , ಸದರಿ ಹಕ್ಕು ಪತ್ರವನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಒಪ್ಪಿದ್ದು ಸದರಿ ದಾಖಲೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಸದರಿ ನಿಪಿ-6 ರ ಪ್ರಕಾರ ನನ್ನ ಸ್ವತ್ತಿನ ಪೂರ್ವಕ್ಕೆ ರಾಮಣ್ಣನ ಮನೆ ಎಂದು ತೋರಿಸಲಾಗಿದೆ ಎಂದರೆ ಸರಿ.

ವಾದಿ ದಾವಾ ಸ್ವತ್ತನ್ನು ಖರೀದಿಸಿದ ನಂತರ ಅರಕೆರೆ ಗ್ರಾಮ ಪಂಚಾಯಿತಿಯಿಂದ ವಾದಿಯ ಹೆಸರಿಗೆ ಖಾತೆ ದಾಖಲಾಗಿರುತ್ತದೆ ಎಂದರೆ ಸರಿ. ವಾದಿ ಖರೀದಿಸಿದ ಸ್ವತ್ತಿನಲ್ಲಿ ಅರ್ಧ ಭಾಗದಲ್ಲಿ ಮನೆ ಕಟ್ಟಿಕೊಂಡಿದ್ದು ಉಳಿದ ಅರ್ಧ ಬಾಗ ಖಾಲಿ ನಿವೇಶನ ಉಳಿಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾವೇ ವಾದಿಗೆ ಅರ್ಧ ಬಾಗ ಬಿಟ್ಟುಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನನಗೆ ನಿಪಿ-6 ರ ಪ್ರಕಾರ ಬಂದ ಸ್ವತ್ತಿನಲ್ಲಿ

This is a True Copy of the Court Records Online. Authenticated @ districts.ecourtsindia.com/cnr/KATK030019462020/truecopy/order-3.pdf

ನಾನು ಶೀಟಿನ ಮನೆ ಕಟ್ಟಿಕೊಂಡಿದ್ದೇನೆ ಎಂದರೆ ಸರಿ. ನಿಡಿ-3 ರ ಕ್ರಯಪತ್ರದ ಪ್ರಕಾರ ಹರಪಗೊಂಡನಹಳ್ಳಿ ಗ್ರಾಮದ ಪಂಚಾಯತ್ ಖಾತೆ ಸಂಖ್ಯೆ 324/63/15 ರ ವಿಸ್ತೀರ್ಣ ಪೂರ್ವ ಪಶ್ಚಿಮ 40 ಅಡಿ ಮತ್ತು ಉತ್ತರ ದಕ್ಷಿಣ 30 ಅಡಿ ಖಾಲಿ ನಿವೇಶನ ವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಯು ಸದರಿ ಸ್ವತ್ತನ್ನು ಸಹ ಒಟ್ಟು ಕುಟುಂಬದ ಆದಾಯದಿಂದ ವಾದಿಯ ಹೆಸರಿನಲ್ಲಿ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ನಿಡಿ-4 ನಮೂನೆ-9 ರಲ್ಲಿಯೂ ಸಹ ನನ್ನ ಸ್ವತ್ತಿನ ಪೂರ್ವಕ್ಕೆ ರಾಮಣ್ಣನ ಮನೆ ಎಂದು ನಮೂದು ಇದೆ ಎಂದರೆ ಸರಿ. ಮಾದಾವರ ಗ್ರಾಮದಲ್ಲಿರುವ ಸ.ನಂ. 5/4 ರ ವಿಸ್ತೀರ್ಣ 1 ಎಕರೆ ಇದೆ.

ನನ್ನ ಪ್ರತಿವಾದ ಪತ್ರ ಸಲ್ಲಿಸಲು ನನ್ನ ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನನ್ನ ಪ್ರತಿವಾದ ಪತ್ರದಲ್ಲಿ ಪ್ಯಾರಾ 9 ರಲ್ಲಿ ತೋರಿಸಿರುವ ಐಟಂ ನಂ. 6 ಸ್ವತ್ತಿಗೆ ಸರ್ವೆ ನಂಬರ್ ತೋರಿಸಿಲ್ಲ ಎಂದರೆ ಸರಿ . ನಾನು ಹಾಜರುಪಡಿಸಿರುವ ನಿಡಿ-7 ರಿಂದ ಡಿ-13 ದಾಖಲೆಗಳನ್ನು ಕೇವಲ ಒಂದು ದಿನಕ್ಕೆ ಸಂಬಂಧಿಸಿದಂತೆ ಮಾತ್ರ ಪಡೆದಿರುತ್ತೇನೆ ಎಂದರೆ ಸರಿ. ನಿಡಿ-14 ರ ಪ್ರಕಾರ ವಿದ್ಯುತ್ ಸಂಪರ್ಕವನ್ನು ನನ್ನ ಮನೆಗೆ ಪಡೆದಿರುತ್ತೇನೆ ಎಂದರೆ ಸರಿ .ಸಾಕ್ಷಿಯು ಮುಂದುವರಿದು ನನ್ನ ಹೊಸ ಮನೆಗೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-19 ಮತ್ತು 20 ಗ್ಯಾಸ್ ಬಿಲ್ ಗಳು ನನ್ನ ಮನೆಗೆ ಗ್ಯಾಸ್ ಸಂಪರ್ಕ ಪಡೆದ ಸಂಬಂದ ಹಾಜರುಪಡಿಸಿರುತ್ತೇನೆ ಎಂದರೆ ಸರಿ . ನಿಡಿ-22 ಮತ್ತು 23 ದಾಖಲೆಗಳನ್ನು ನನಗೆ ಪೂರಕವಾಗುವಂತೆ ಸೃಷ್ಟಿಸಿಕೊಂಡಿರುತ್ತೇನೆ ಎಂದೆರ ಸರಿಯಲ್ಲ. ನಿಡಿ-24 ತೆರಿಗೆ ಪಾವತಿ ರಸೀದಿ ನನ್ನ ಮನೆಗೆ ಸಂಬಂದಿಸಿದ್ದು ಎಂದರೆ ಸಾಕ್ಷಿಯು ಹೊಸ ಮನೆಗೆ ಸಂಬಂದಿಸಿದ್ದಾಗಿದೆ ಎಂದು ನುಡಿಯುತ್ತಾರೆ. ಸದರಿ ದಾಖಲೆ ಪ್ರಕಾರ ಸ್ವತ್ತಿನ ಖಾತಾ ಸಂಖ್ಯೆ 536 ಕ್ಕೆ ಸಂಬಂದಿಸಿದಂತೆ ಕಂದಾಯ ಪಾವತಿಸಲಾಗಿದೆ ಎಂದರೆ ಸರಿ . ನನ್ನ ಪ್ರತಿವಾದ ಪತ್ರದ ಪ್ಯಾರಾ9 ರಲ್ಲಿ ತೋರಿಸಿರುವ ಐಟಂ ನಂ. 2 ಸ್ವತ್ತು ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು ಇನ್ನೂ ಭಾಗ ಆಗಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಐಟಂ ನಂ. 3 ಸ್ವತ್ತು ವಾದಿಯ ಪತ್ನಿಯ ಹೆಸರಿನಲ್ಲಿಲ್ಲ ಬದಲಾಗಿ ವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾದಿ ವಾಸವಿದ್ದಾರೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು ಅರ್ಧ ಜಾಗದಲ್ಲಿ ನಾವು ಇದ್ದು ಅರ್ಧ ಜಾಗದಲ್ಲಿ ವಾದಿ ಇದ್ದಾರೆ ಎಂದು ನುಡಿಯುತ್ತಾರೆ.

This is a True Copy of the Court Records Online. Authenticated @ districts.ecourtsindia.com/cnr/KATK030019462020/truecopy/order-3.pdf

ಓಎಸ್ ನಂ.207|2020
ಡಿ ಡಬ್ಲ್ಯೂ-1

ಪ್ರತಿವಾದ ಪತ್ರದಲ್ಲಿ ತೋರಿಸಿರುವ ಐಟಂ ನಂ 6 ಸ್ವತ್ತಿನಲ್ಲಿ ಈಗ ಉಳುಮೆ ಮಾಡುತ್ತಿಲ್ಲ ಎಂದರೆ ಸರಿ. ನನ್ನ ಈಗ್ಗೆ 2 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಈ ದಾವೆ ಸಲ್ಲಿಸಿದ ನಂತರ ನಾನು ಒಟ್ಟು ಕುಟುಂಬದ ಸ್ವತ್ತುಗಳಿಗೆ ಸಂಬಂದಿಸಿದಂತೆ ವಿಭಾಗ ಕೋರಿ ಯಾವುದೇ ದಾವೆ ಸಲ್ಲಿಸಿರುವುದಿಲ್ಲ . ದಾವಾ ಸ್ವತ್ತನ್ನು ವಾದಿ ಅವರ ಸ್ವಂತ ಆದಾಯದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯ ಸ್ವತ್ತಿನ ಸ್ವಾದೀದಿನಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ಸ್ವತ್ತಿನ ಮದ್ಯೆ ಕಾಂಪೌಂಡ್ ಗೋಡೆ ಇದೆ ಎಂದರೆ ಸರಿಯಲ್ಲ. ನಾನು ವಾದಿಯ ಸ್ವತ್ತಿನ ಸ್ವಾದೀನಕ್ಕೆ ತೊಂದರೆ ಕೊಡುತ್ತಿದ್ದ ಕಾರಣ ವಾದಿ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ಈಗಲೂ ಸಹ ವಾದಿಯೆ ಸಾಕುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನಲ್ಲಿ ಹಾಗೂ ಕೊರಟಗೆರೆಯ ಮನೆಯುಲ್ಲಿಯೂ ಸಹ ವಾಸವಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯ ವಿರುದ್ದ ಗಲಾಟೆ ಮಾಡಿದ ಕಾರಣ ವಾದಿ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ದೂರಿಗೆ ಸಂಬಂದಿಸಿದಂತೆ ನನ್ನನ್ನು ಪೊಲೀಸ್ ಠಾಣೆಗೆ ಕರೆಸಿ ಬುದ್ದಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಸ್ವಾದೀನ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಎರಡನೇ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,
ತುಮಕೂರು.

This is a True Copy of the Court Records Online. Authenticated @ districts.ecourtsindia.com/cnr/KATK030019462020/truecopy/order-3.pdf

This is a True Copy of the Court Records Online. Authenticated @ districts.ecourtsindia.com/cnr/KATK030019462020/truecopy/order-3.pdf

www.ecourtsindia.com

ಪ್ರಧಾನ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,
ತುಮಕೂರು. C/c

This is a True Copy of the Court Records Online. Authenticated @ districts.ecourtsindia.com/cnr/KATK030019462020/truecopy/order-3.pdf

www.ecourtsindia.com